ಕ್ರಿಮಿನಲ್.ಮಿಸ್ಲೇನಿಯಸ್.ನಂ. 1444/2022

ಪಿ.ಡಬ್ಲ್ಯೂ-1. ಶಶಿಕಲಾ ಗಂಡ ಚಂದ್ರಶಾ ಗಡೇಕರ್ ಸಾ. ಇಂಗಳಗಿ ಹಾ.ವ. ಸಂಗೋಳಗಿ(ಜಿ)

**ಸಾಕ್ಷಿಯನ್ನು ಇಂದು ದಿನಾಂಕಃ 04.01.2024 ರಂದು ಕರೆದು ಪ್ರಮಾಣೀಕರಿಸಲಾಯಿತು**

**ಮುಖ್ಯ ವಿಚಾರಣೆ ಅರ್ಜಿದಾರ ಪರ ಶ್ರೀ ಬಿ.ಎ.ಡಿ. ವಕೀಲರಿಂದ**

ಅರ್ಜಿದಾರ ನಂ.೨ ನನ್ನ ಮಗನಾಗಬೇಕು. ಎದುರುದಾರ ನನ್ನ ಗಂಡನಾಗಬೇಕು. ನಮ್ಮ ಮದುವೆ 17-11-2005 ರಲ್ಲಿ ಇಂಗಳಗಿ ಗ್ರಾಮ, ತಾ. ಸೋಲಾಪುರ, ಜಿ. ಸೋಲಾಪುರದ ಅಮೋಘಸಿದ್ದ ದೇವಸ್ಥಾನದಲ್ಲಿ ಆಗಿರುತ್ತದೆ. ಮದುವೆ ಆದ ನಂತರ ನನ್ನ ವೈವಾಹಿಕ ಜೀವನವನ್ನು ನಡೆಸಲು ನನ್ನ ಗಂಡನ ಮನೆಗೆ ಹೋಗಿರುತ್ತೇನೆ. ಅಲ್ಲಿ ನನ್ನ ವೈವಾಹಿಕ ಸಂಬಂಧದಿಂದ ಅರ್ಜಿದಾರ ನಂ.೨ ಜನಿಸಿರುತ್ತಾರೆ. ಮದುವೆ ಆದ ನಾಲ್ಕು ತಿಂಗಳು ಮಾತ್ರ ಚೆನ್ನಾಗಿ ಇಟ್ಟುಕೊಂಡಿರುತ್ತಾರೆ. ನಂತರ ನನ್ನ ಅತ್ತೆ ಮಾವ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡುತ್ತಿದ್ದರು. ನನ್ನ ಗಂಡ ಭಾರತೀಯ ಸೇನೆಯಲ್ಲಿ ಕೆಲಸ ಮಾಡುತ್ತಿದ್ದನು. ನಂತರ ನನ್ನ ಗಂಡನೂ ಸಹ ಕೂಡ ವರದಕ್ಷಿಣೆ ತೆಗೆದುಕೊಂಡು ಬಾ ಬಂಗಾರ ತೆಗೆದುಕೊಂಡು ಬಾ ಎಂದು ಕಿರುಕುಳ ಕೊಟ್ಟು ಮನೆಯಿಂದ ಹೊರಗೆ ಹಾಕಿರುತ್ತಾರೆ. ನಾನು ಈಗ ನನ್ನ ತವರು ಮನೆಯಲ್ಲಿ ಇರುತ್ತೇನೆ. ಎದುರುದಾರರು ನನಗಾಗಲಿ ಅರ್ಜಿದಾರ ನಂ.೨ ರವರಿಗಾಗಲಿ ಯಾವುದೇ ರೀತಿಯ ಜೀವನಾಂಶವನ್ನು ಕೊಡುತ್ತಿಲ್ಲ, ಆದಕಾರಣದಿಂದ ನಾನು ಜೀವನಾಂಶ ಕೇಳಿ ಅರ್ಜಿಯನ್ನು ಸಲ್ಲಿಸಿರುತ್ತೇನೆ.

ಎದುರುದಾರರು ನನಗೆ ಏನೂ ಕೊಡುವುದಿಲ್ಲ, ಹೊಲ ಜಮೀನನ್ನು ಅಣ್ಣನ ಮಕ್ಕಳ ಹೆಸರಿಗೆ ಮಾಡುತ್ತೇನೆ ಎಂದು ಹೇಳುತ್ತಿರುತ್ತಾನೆ. ಅಣ್ಣನ ಹೆಂಡತಿಯ ಜೊತೆಗೆ ಅನೈತಿಕ ಸಂಬಂಧವನ್ನು ಹೊಂದಿರುತ್ತಾನೆ. ಎದುರುದಾರನಿಗೆ ಸುಮಾರು 15 ಎಕರೆ ನೀರಾವರಿ ಜಮೀನು ಇರುತ್ತದೆ ಮತ್ತು ರೂ.28000/- ಗಳ ಪೆನಶನ್ ಬರುತ್ತದೆ. ಜಿಯೋ ಕಂಪನಿಯಲ್ಲಿ ಕೆಲಸಕ್ಕೆ ಹೋಗುತ್ತಾನೆ ಅದರಿಂದ ರೂ.25000/- ಸಂಬಳ ಬರುತ್ತದೆ. ಎದುರುದಾರನು ನನ್ನ ಅರ್ಜಿಯಲ್ಲಿ ಕೇಳಿದಷ್ಟು ಜೀವನಾಂಶ ಕೊಡಲು ಸಶಕ್ತನಿದ್ದಾನೆ.

ನನ್ನ ಆಧಾರ ಕಾರ್ಡನ್ನು ಹಾಜರುಪಡಿಸಿದ್ದು ಅದನ್ನು ನಿಪಿ-೧ ಎಂದು, ಅರ್ಜಿದಾರ ನಂ.೨ ರವರ ಆಧಾರ ಕಾರ್ಡನ್ನು ಹಾಜರುಪಡಿಸಿದ್ದು ಅದನ್ನು ನಿಪಿ-೨ ಎಂದು ಗುರುತಿಸಲಾಯಿತು.

[ಈ ಹಂತದಲ್ಲಿ ಅರ್ಜಿದಾರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ ಕಾರಣ ನೀಡಲಾಯಿತು ]

ಓ.ಹೇ.ಕೆ.ಸರಿ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ.ಆಳಂದ.